## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 197 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 05.03.2025 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಾರ್ವಜನಿಕ ಉದ್ದೇಶಗಳಿಗೆ ಭೂಮಂಜೂರಾತಿಗೆ ಕೋರಿದ ಅರ್ಜಿಗಳೆಷ್ಟು; ಮಂಜೂರಾತಿಯೆಷ್ಟು; ಬಾಕಿಯೆಷ್ಟು; ಬಾಕಿ ಉಳಿಯಲು ಕಾರಣವೇನು; | ರಾಜ್ಯದಲ್ಲಿ ಸಾರ್ವಜನಿಕ ಉದ್ದೇಶಗಳಿಗೆ ಭೂ ಮಂಜೂರಾತಿಗೆ ಸ್ವೀಕೃತವಾಗಿರುವ, ಮಂಜೂರಾಗಿರುವ ಹಾಗೂ ಬಾಕಿ ಉಳಿದಿರುವ ಅರ್ಜಿಗಳ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಬಗರ್ ಹುಕುಂ ಅಕ್ರಮ ಸಕ್ರಮ ಭೂಮಿ ಮಂಜೂರಾತಿ ಕುರಿತಂತೆ ಆಯಾಯ ಮಟ್ಟದ ಸಮಿತಿಗಳು ನಿಯಮಿತವಾಗಿ ಸಭೆ ಸೇರಿವೆಯೇ; ಸಭೆ ಕರೆಯುವ ಜವಾಬ್ದಾರಿ ಯಾರದ್ದು; ಈ ಸಭೆಗಳು ಜರುಗದೆ ಭೂ ಮಂಜೂರಾತಿ ಕಡತಗಳು ಬಾಕಿಯಾಗಿರುವ ಬಗ್ಗೆ ಸರ್ಕಾರ ಏನು ಕ್ರಮವಹಿಸುತ್ತಿದೆ; | ಅನಧಿಕೃತ ಸಾಗುವಳಿ ಸಕ್ರಮೀಕರಣ ಸಮಿತಿ ಸಭೆ ಕರೆಯುವ ಜವಾಬ್ದಾರಿಯು ಸಮಿತಿಯ ಸದಸ್ಯ ಕಾರ್ಯದರ್ಶಿಗಳದ್ದಾಗಿರುತ್ತದೆ. ಕಾಲಕಾಲಕ್ಕೆ ಸಮಿತಿಯ ಸಭೆಯನ್ನು ಕರೆದು ಭೂ ಮಂಜೂರಾತಿ ಕಡತಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ ನಿಯಮ 108 (ಡಿ) ಅನುಸಾರ ಸಮಿತಿ ಸಭೆಯಲ್ಲಿ ನಿಯಮಾನುಸಾರ ಪರಿಶೀಲಿಸಿ ಮಂಜೂರಾತಿಗೆ ಕ್ರಮವಹಿಸಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಬಗರ್ ಹುಕುಂ ಭೂಮಂಜೂರಾತಿ ನಿಯಮಗಳು ಮತ್ತು ಷರತ್ತುಗಳೇನು; | ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಕಲಂ 94(ಎ), 94(ಬಿ) ಹಾಗೂ 94(ಎ4) ರಡಿ ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳು, 1966 ಅದ್ಯಾಯ XIII-ಎ ರಲ್ಲಿ ನಿಯಮಗಳು ಹಾಗೂ ಷರತ್ತುಗಳನ್ನು ನಿಗದಿಪಡಿಸಲಾಗಿರುತ್ತದೆ. |
| ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಕ್ರಮ ಸಕ್ರಮ ಭೂ ಮಂಜೂರಾತಿ ಅರ್ಜಿಗಳು ಯಾವ ಹಂತದಲ್ಲಿ ಎಷ್ಟು ಸಮಯದಿಂದ ವಿಲೆವಾರಿಗೆ ಬಾಕಿಯಿದೆ; ಭೂಮಂಜೂರಾತಿ ನಿಯಮಗಳನ್ವಯ ಯಾವುದಾದರೂ ಒಂದು ಷರತ್ತಿನಂತೆ ಮಂಜೂರಾತಿಗೆ ಅವಕಾಶವಿಲ್ಲದ ಪ್ರಕರಣಗಳನ್ನು ತಿರಸ್ಕರಿಸದೆ ಕಡತ ಮುಂದುವರಿಸಿ ಒಟ್ಟು ಅರ್ಜಿಗಳ ವಿಲೆವಾರಿಯಲ್ಲಿ ಸಮಸ್ಯೆಯಾಗುತ್ತಿರುವ ಬಗ್ಗೆ ಇಲಾಖೆಯ ಕ್ರಮಗಳೇನು; | **ದಕ್ಷಿಣ ಕನ್ನಡ:** (see table below) **ಉಡುಪಿ:** ಅಕ್ರಮಸಕ್ರಮ ಯೋಜನೆಯಡಿಯಲ್ಲಿ ನಮೂನೆ 50 ರಲ್ಲಿ ಒಟ್ಟು 1111 ಅರ್ಜಿಗಳು ಮತ್ತು ನಮೂನೆ 53 ರಲ್ಲಿ ಒಟ್ಟು 13188 ಅರ್ಜಿಗಳು ಹಾಗೂ ನಮೂನೆ 57 ರಲ್ಲಿ ಒಟ್ಟು 59679 ಅರ್ಜಿಗಳು ಬಾಕಿ ಇರುತ್ತವೆ. ಸದರಿ ಅರ್ಜಿಗಳಲ್ಲಿ ಬಹುತೇಕ ಕುಮ್ಕಿ ಗೋಮಾಳ ಡೀಮ್ಡ್ ಫಾರೆಸ್ಟ್ ಎಂಬ ಕಾರಣಗಳಿಂದಾಗಿ ಅರ್ಜಿಗಳು ವಿಲೇವಾರಿಗೆ ಬಾಕಿ ಇರುತ್ತದೆ. ಭೂ ಮಂಜೂರಾತಿ ನಿಯಮಗಳನ್ವಯ ಯಾವುದಾದರೂ |

**ದಕ್ಷಿಣ ಕನ್ನಡ:**

| ನಮೂನೆ | ಸ್ವೀಕೃತ ಅರ್ಜಿಗಳು | ಮಂಜೂರಾದ ಅರ್ಜಿಗಳು | ತಿರಸ್ಕೃತ ಅರ್ಜಿಗಳು | ಬಾಕಿ ಅರ್ಜಿಗಳು |
|---|---|---|---|---|
| 50 | 113730 | 46605 | 67119 | 6 |
| 53 | 111420 | 32336 | 75530 | 3554 |
| 57 | 124405 | 4863 | 13590 | 105952 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಒಂದು ಷರತ್ತಿನಂತೆ ಮಂಜೂರಾತಿಗೆ ಅವಕಾಶವಿಲ್ಲದ ಪ್ರಕರಣಗಳನ್ನು ತಿರಸ್ಕರಿಸದೆ ಕಡತ ಮುಂದುವರಿಸಿ ಒಟ್ಟು ಅರ್ಜಿಗಳ ತಿರಸ್ಕರಿಸಲು ಸರಕಾರದ ಸುತ್ತೋಲೆ ಸಂಖ್ಯೆ: ಆರ್ ಡಿ 02 ಎಲ್.ಜಿ.ಪಿ. 2021, ದಿನಾಂಕ:30.01.2021 ಮತ್ತು ಆರ್ ಡಿ 45 ಎಲ್.ಜಿ.ಪಿ. 2023, ದಿನಾಂಕ: 01.12.2023 ರಂತೆ ಕ್ರಮವಹಿಸಲಾಗುತ್ತಿದೆ. ಅದರಂತೆ ಅನರ್ಹ ಪ್ರಕರಣಗಳಲ್ಲಿ ವಿಲೇವಾರಿಗೆ ಕ್ರಮವಹಿಸಲಾಗುತ್ತಿದೆ. |
| ಉ) | ಈ ಜಿಲ್ಲೆಗಳಲ್ಲಿ ಭೂಮಂಜೂರಾತಿ ಅರ್ಜಿ ತಿರಸ್ಕೃತವಾಗುವ ಮಾಹಿತಿಯಿರುವ ಪ್ರಭಾವಿಗಳು ಸದರಿ ಸ್ಥಳದಲ್ಲಿರುವ ಮರಗಳನ್ನು ಕಡಿಯುತ್ತಿರುವ, ಜೆಸಿಬಿಯಿಂದ ಬೇಲಿ ಹಾಕಿರುವ, ಕೊಳವೆ ಬಾವಿ ಕೊರೆದಿರುವ, ಅಕ್ರಮ ಕಟ್ಟಡ ಕಟ್ಟಿ ಸಿ. ಸಿ. ಟಿವಿ, ಇತ್ಯಾದಿ ಅಳವಡಿಸಿರುವ ಪ್ರಕರಣಗಳಲ್ಲಿ ಇಲಾಖೆ ಪರಿಶೀಲಿಸಿ ಸರಕಾರಿ ಸ್ಥಳಗಳನ್ನು ಸರಕಾರದ ಸುಪರ್ಧಿಗೆ ವಹಿಸಿಕೊಳ್ಳಲು ಏನು ಕ್ರಮವಹಿಸಲಾಗುತ್ತಿದೆ: | ಬಗರ್‌ಹುಕುಂ ಅರ್ಜಿಗಳು ಬಗರ್ ಹುಕುಂ ಆಪ್ ಮೂಲಕ ಪರಿಶೀಲನೆಯಾಗುತ್ತಿದ್ದು ಅನರ್ಹ ಅರ್ಜಿಗಳು ತಿರಸ್ಕೃತವಾದ ನಂತರ ಅಕ್ರಮಿತ ಸ್ಥಳವನ್ನು ಕರ್ನಾಟಕ ಭೂ ಕಂದಾಯ, 1964ರ ಕಲಂ 104 ರಂತೆ ನಿಯಮಾನುಸಾರ ಪರಿಶೀಲಿಸಿ ಒತ್ತುವರಿ ತೆರವುಗೊಳಿಸಿ ಸರ್ಕಾರದ ಸುಪರ್ಧಿಗೆ ತೆಗೆದುಕೊಳ್ಳಲು ಕ್ರಮ ವಹಿಸಲಾಗುತ್ತಿದೆ. |
| ಊ) | ಈಗಾಗಲೇ ಒಂದಕ್ಕಿಂತ ಹೆಚ್ಚು ಸಾಗುವಳಿ ಚೀಟಿ ಮೂಲಕ ಭೂಮಿ ಹೊಂದಿರುವ ವ್ಯಕ್ತಿ ಮತ್ತು ಕುಟುಂಬಕ್ಕೆ ಇನ್ನೊಮ್ಮೆ ಬಗರ್ ಹುಕುಂ ಭೂಮಿ ಮಂಜೂರಾತಿಗೆ ಅವಕಾಶವಿದೆಯೇ; ಇಲ್ಲದಿದ್ದಲ್ಲಿ ಇಂತಹ ಪ್ರಕರಣಗಳಲ್ಲಿ ಭೂಮಂಜೂರಾತಿಯನ್ನು ರದ್ದುಪಡಿಸಿ ಸರ್ಕಾರಿ ಭೂಮಿಯ ಅಕ್ರಮಣವನ್ನು ವಿರಹಿತಗೊಳಿಸಲು ಯಾವ ಕ್ರಮವಹಿಸಿದೆ? | ಸದರಿ ನಿಯಮಗಳಡಿ ಮಂಜೂರಾತಿ ಕೋರಿರುವ ವ್ಯಕ್ತಿಯು ಈಗಾಗಲೇ ಹೊಂದಿರುವ ಭೂಮಿಯ ಜೊತೆಗೆ ಹಾಗೆ ಮಂಜೂರಾದ ಭೂಮಿಯು, ಡಿ ದರ್ಜೆಯ ಭೂಮಿ ಅಥವಾ ಅದಕ್ಕೆ ಸಮನಾದ ಭೂಮಿಯು ಎರಡು ಹೆಕ್ಟೇರ್‌ಗಿಂತ ಮೀರತಕ್ಕದ್ದಲ್ಲ. ಸದರಿ ವಿಸ್ತೀರ್ಣ ಮೀರಿರುವ ಪ್ರಕರಣಗಳನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮಗಳು 1966 ರ ನಿಯಮ 108 ಕೆ ರನ್ವಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿಕೊಂಡು ಇತ್ಯರ್ಥಪಡಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 7 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

LCQ 197

| ಅನುಭಂದ | | | | | |
|---|---|---|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಾಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 116(197) ಕ್ಕೆ ಉತ್ತರ ರಾಜ್ಯದಲ್ಲಿ | | | | | |
| ಕ್ರಮ ಸಂ | ಜಿಲ್ಲೆ | ಮಂಜೂರಾತಿ ಕೋರಿರುವ ಅರ್ಜಿ | ಮಂಜೂರಾತಿ | ಬಾಕಿ | ಬಾಕಿ ಇರಲು ಕಾರಣಗಳು |
| 1 | ಬಾಗಲಕೋಟೆ | 252 | 227 | 25 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 2 | ಬಳ್ಳಾರಿ | 400 | 382 | 18 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 3 | ಬೆಂಗಳೂರು ಗ್ರಾಮಾಂತರ | 222 | 168 | 54 | ವಿವಿಧ ಉದ್ದೇಶಗಳಿಗೆ ಜಮೀನು ಗುರುತಿಸಿ ಕಾಯ್ದಿರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. |
| 4 | ಬೆಳಗಾವಿ | 126 | 97 | 29 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 5 | ಬೆಂಗಳೂರು ನಗರ | 13961 | 2063 | 0 | 11898 ಅರ್ಜಿಗಳನ್ನು ನಿಷೇಧಿತ ಸರ್ಕಾರಿ ಜಮೀನು ಮತ್ತು ಅಲಭ್ಯ ಸರ್ಕಾರಿ ಜಮೀನುಗಳನ್ನು ಕೋರಿದ್ದ ಮೇರೆಗೆ ಅರ್ಜಿಗಳನ್ನು ವಿಲೇಪಡಿಸಲಾಗಿದೆ |
| 6 | ಬೀದರ್ | 56 | 30 | 26 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 7 | ಚಾಮರಾಜನಗರ | 346 | 322 | 24 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 8 | ಚಿಕ್ಕಬಳ್ಳಾಪುರ | 140 | 140 | 0 | ಯಾವುದೂ ಬಾಕಿ ಇರುವುದಿಲ್ಲ |
| 9 | ಚಿಕ್ಕಮಗಳೂರು | 368 | 258 | 110 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 10 | ಚಿತ್ರದುರ್ಗ | 154 | 102 | 52 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 11 | ದಕ್ಷಿಣ ಕನ್ನಡ | 55 | 48 | 7 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 12 | ದಾವಣಗೆರೆ | 138 | 131 | 7 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 13 | ದಾರವಾಡ | 17 | 12 | 5 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 14 | ಗದಗ | 28 | 18 | 10 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 15 | ಹಾಸನ | 534 | 534 | 0 | ಯಾವು ಬಾಕಿ ಇರುವುದಿಲ್ಲ |
| 16 | ಹಾವೇರಿ | 10 | 8 | 2 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 17 | ಕಲಬುರಗಿ | 80 | 20 | 60 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 18 | ಕೊಡಗು | 448 | 448 | 0 | ಯಾವುದೂ ಬಾಕಿ ಇರುವುದಿಲ್ಲ |
| 19 | ಕೋಲಾರ | 1016 | 748 | 268 | ಸೂಕ್ತ ಜಮೀನನ್ನು ಸರ್ವೆ ಮಾಡಿ ಗುರುತಿಸಿ ಕ್ರಮವಹಿಸಬೇಕಾಗಿರುತ್ತದೆ. |
| 20 | ಕೊಪ್ಪಳ | 132 | 132 | 0 | ಯಾವುದೂ ಬಾಕಿ ಇರುವುದಿಲ್ಲ |
| 21 | ಮಂಡ್ಯ | 678 | 636 | 42 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 22 | ಮೈಸೂರು | 96 | 87 | 9 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 23 | ರಾಯಚೂರು | 485 | 364 | 121 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 24 | ರಾಮನಗರ | 151 | 109 | 42 | ಬಾಕಿ ಇರುವ ಪ್ರಕರಣಗಳಿಗೆ ನಿಯಮಾನುಸಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 71 ಅಡಿ ಪ್ರಸ್ತಾವನೆ ಕಾರ್ಯ ಪ್ರಗತಿ ಹಂತದಲ್ಲಿರುತ್ತದೆ. |
| 25 | ಶಿವಮೊಗ್ಗ | 1154 | 962 | 185 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 26 | ತುಮಕೂರು | 4226 | 4110 | 116 | 1. ಸ್ಥಳ ತನಿಖೆ ವೇಳೆ ಸಾರ್ವಜನಿಕರಿಂದ ತಕರಾರು ಬಂದಮತಹ ಪ್ರಕರಣಗಳು.<br>2. ಬಗರ್ ಹುಕುಂ ಸಾಗುವಳಿ ಸ್ರಮೀಕರಣ ಸಂಬಂಧ ವಿವಿಧ ನ್ಯಾಯಲಯಗಳಲ್ಲಿ ತಡೆಯಾಜ್ಞೆ ನೀಡಿ ಬಾಕಿರುವ ಪ್ರಕರಣಗಳು.<br>3. ಮಂಜೂರಾತಿಗೆ ಸೂಕತ್ ಜಮೀನು ಲಭ್ಯವಿಲ್ಲದ ಪ್ರಕರಣಗಳು.<br>4. ಪಹಣಿಯಲ್ಲಿ ವಿಸ್ತೀರ್ಣ ಲಭ್ಯವಿದ್ದು .ದುರಸ್ತೀಯಾಗದ ಕಾರಣ ಉಳಿಕೆ ಜಮೀನು ಗುರ್ತಿಸುವುದು ಕಷ್ಟ ಸಾಧ್ಯವಾಗಿದ್ದು ದುರಸ್ತಿ ಕ್ರಮವಹಿಸಿದ ನಂತರ ಕ್ರಮ ವಹಿಸಲಾಗುತ್ತದೆ. |
| 27 | ಉಡುಪಿ | 652 | 396 | 256 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 28 | ಉತ್ತರ ಕನ್ನಡ | 463 | 461 | 2 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 29 | ವಿಜಯನಗರ | 469 | 449 | 20 | 20 ಅರ್ಜಿಗಳು ಅನುದಾನ ಲಭ್ಯತೆ ಕಿರಿತು ಹಾಗೂ ವರದಿಗಾಗಿ ವಿವಿಧ ಇಲಾಖೆಗಳಿಗೆ ಪತ್ರ ಬರೆದು ಕ್ರಮವಹಿಸಲಾಗಿರುತ್ತದೆ. |
| 30 | ವಿಜಯಪುರ | 58 | 17 | 41 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| 31 | ಯಾದಗಿರಿ | 501 | 426 | 75 | ಪರಿಶೀಲನೆ ಹಂತದಲ್ಲಿ ಬಾಕಿ ಇರುತ್ತದೆ. |
| | ಒಟ್ಟು | 27416 | 13905 | 1606 | |